# ಸೋಂದಾದಲ್ಲಿ ಮೂರು ದಿನಗಳ ಕೆರೆ ಸಮ್ಮೇಳನ

ಶಿರಸಿ: ವೃಕ್ಷಲಕ್ಷ ಆಂದೋಲನ ಹಾಗೂ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಇಂದಿನಿಂದ ತಾಲೂಕಿನ ಸೋಂದಾದಲ್ಲಿ 'ಕೆರೆ ಸಮ್ಮೇಳನ' ಸೋಂದಾದಲ್ಲಿ ಆರಂಭವಾಗಲಿದ್ದು, ಉ.ಕ ಜಿಲ್ಲೆ ಸೇರಿದಂತೆ ಮಲೆನಾಡಿನ ಕೆರೆಗಳು/ಜಲಮೂಲಗಳ ಸಂರಕ್ಷಣೆ ವಿಷಯದ ಮೇಲೆ 3 ದಿನ ಸಮ್ಮೇಳನ ಚರ್ಚೆ ನಡೆಸಲಿದೆ.

ಉದ್ಘಾಟನಾ ಸಮಾರಂಭದಲ್ಲಿ ಪಶ್ಚಿಮ ಘಟ್ಟದ ಜಲಮೂಲಗಳ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯ ಅಧ್ಯಯನ ವರದಿಯ ಬಿಡುಗಡೆ ಆಗಲಿದೆ. ಪಶ್ಚಿಮ ಘಟ್ಟದ ಕೆರೆಗಳು ಹಳ್ಳಗಳ ಪರಿಸ್ಥಿತಿ ಬಗ್ಗೆ ವಿವರ ವಿಶ್ಲೇಷಣೆ ನಡೆಯಲಿದೆ. ಮಲೆನಾಡಿನಲ್ಲಿ ಕೆರೆಗಳ ಹೂಳು ತುಂಬುವಿಕೆ ದೊಡ್ಡ ಸಮಸ್ಯೆ ಕೆರೆ ಮಾಲಿನ್ಯ ಮಲೆನಾಡಲ್ಲಿ ಗಂಭೀರವಾಗಿಲ್ಲ. ಆದರೆ ಪಟ್ಟಣಗಳಲ್ಲಿ ಇರುವ ಕೆರೆಗಳ ನಿರ್ವಹಣೆ ಕಷ್ಟವಾಗಿದೆ. ಕಿರು ನೀರಾವರಿ ಇಲಾಖೆ ದೊಡ್ಡ ಕೆರೆಗಳ ಬಗ್ಗೆ ಗಮನ ನೀಡುತ್ತದೆ. ಆದರೆ ಮಲೆನಾಡಲ್ಲಿ ಬಹುತೇಕ ಅತಿ ಸಣ್ಣ ಒಂದು ಎಕರೆ ಅಥವಾ ಇನ್ನೂ ಚಿಕ್ಕವು. ಇವುಗಳ ಸಂಖ್ಯೆ ಉ.ಕ. ಜಿಲ್ಲೆ ಒಂದರಲ್ಲೇ 6000 ಕ್ಕಿಂತ ಹೆಚ್ಚಿವೆ.

ವೃಕ್ಷಲಕ್ಷ ಆಂದೋಲನ 10 ವರ್ಷ ಹಿಂದೆ ಕೈಗೊಂಡ ಗ್ರಾಮ ಜೀವವೈವಿಧ್ಯ ದಾಖಲಾತಿಯಲ್ಲಿ 60 ಹಳ್ಳಿಗಳಲ್ಲಿ 400 ಕ್ಕೂ ಹೆಚ್ಚು ಅತಿಸಣ್ಣ ಕೆರೆಗಳ ಮಾಹಿತಿ ಲಭ್ಯವಾಗಿತ್ತು. ಉ.ಕ. ಜಿಲ್ಲೆಯಲ್ಲಿ ಸರ್ಕಾರಿ ಮಾಹಿತಿ ಪ್ರಕಾರ ಜಿಲ್ಲಾ ಪಂಚಾಯತ ಕೆರೆಗಳು 869 ಕೆರೆಗಳು, ಸಣ್ಣ ನೀರಾವರಿ ಇಲಾಖೆಯಲ್ಲಿ 870 ಕೆರೆಗಳು ಇವೆ. ರಾಜ್ಯದಲ್ಲಿ 36000 ಕೆರೆಗಳಿವೆ. ಶಿವಮೊಗ್ಗಾದಲ್ಲಿ 4000 ಕೆರೆಗಳಿವೆ. ಸೊರಬ ತಾಲೂಕಿನಲ್ಲಿ ಮಲೆನಾಡಿನಲ್ಲೇ ಅತಿ ಹೆಚ್ಚು ಎಂದರೆ 300 ಕೆರೆಗಳಿವೆ. ಉ.ಕ ಧಾರಣಾ ಸಾಮರ್ಥ್ಯ ವರದಿಯಲ್ಲಿ ಜಲಮೂಲ ಉಳಿವಿಗೆ ಹಲವಾರು ಶಿಫಾರಸುಗಳಿವೆ. ಉ.ಕ. ದಲ್ಲಿ ಅರಣ್ಯ ಭೂಮಿ 80% ರಷ್ಟು ಅರಣ್ಯ ಮಧ್ಯೆ ಇರುವ ಕೆರೆಗಳ ಬಗ್ಗೆ ಲಕ್ಷ್ಯ ಬೇಕು. 22 ಬೃಹತ್ ನದಿಗಳು, 180 ಉಪನದಿಗಳು ಸುಮಾರು 11000 ಹಳ್ಳಗಳು ಪಶ್ಚಿಮ ಘಟ್ಟದಲ್ಲಿವೆ. ದಕ್ಷಿಣ ಭಾರತಕ್ಕೆ ನೀರುಣಿಸುವ ಈ ಜಲಮೂಲಗಳ ಉಳಿವಿಗೆ ಜನತೆ ಮತ್ತು ಸರ್ಕಾರ ಏನು ಮಾಡಲಿದೆ ? ನದಿಮೂಲಗಳ ಉಳಿವಿಗೆ ಪಶ್ಚಿಮ ಘಟ್ಟ ಕಾರ್ಯಪಡೆ ಮಾದರಿ ಯೋಜನೆ ಜಾರಿ ಮಾಡಿತ್ತು. ಕರಾವಳಿಯ ಅಳಿವೆಗಳ ಉಳಿವಿಗೆ ಕರಾವಳಿ ಹಸಿರು ಕವಚ ಯೋಜನೆ ರೂಪಿಸಿತ್ತು. ಸರ್ಕಾರಗಳು ಇಂತಹ ಮಾದರಿಗಳನ್ನು ಬಜೆಟ್‌ನಲ್ಲಿ ಸೇರಿಸುವಂತಾಗಬೇಕು.

ಕಡೂರು ತಾಲೂಕಿನ ಹೊಂಗ್ರೇಕಾನುಗಿರಿ, ಕೊಡಚಾದ್ರಿಯ ಅಂಬಾರುಗುಡ್ಡ, ಕೊಪ್ಪತಗುಡ್ಡಗಳಂತಹ ಜಲಪಾತ್ರೆಗಳಿಗೆ, ಗಣಿಗಾರಿಕೆಯ ಕಂಪನಿಗಳು ಧಾಳಿ ಮಾಡದಂತೆ ಜನತೆ ಕಟ್ಟೆಚ್ಚರ ಮಾಡಬೇಕಾದ ಅವಶ್ಯಕತೆ ಇದೆ. ಈಗಾಗಲೇ ಜಾರಿಯಾಗಿರುವ ನೀರಾವರಿ ಯೋಜನೆಗಳು ಪಶ್ಚಿಮ ಘಟ್ಟದ ನೀರಿನ ಮೂಲಗಳ ಸಂರಕ್ಷಣೆಗೆ ತಮ್ಮ ನಿರ್ವಹಣೆ ಯೋಜನೆಯಲ್ಲಿ ಪಾಲು ನೀಡುವಂತಾಗಬೇಕೆಂಬುದು ಪರಿಸರ ಸಂಘಟನೆಗಳ ಒತ್ತಾಯವಾಗಿದೆ. ಇನ್ನಷ್ಟು ಬೃಹತ್ ಅರಣ್ಯ ನಾಶೀ, ಅಣೆಕಟ್ಟು ಯೋಜನೆಗಳು, ನದಿ ತಿರುಗಿಸುವ ಯೋಜನೆಗಳು ಪಶ್ಚಿಮ ಘಟ್ಟದಲ್ಲಿ ಅವ್ಯವಹಾರಿಕ ಅಸಾಧ್ಯ ಎಂದೇ ವಿಜ್ಞಾನಿಗಳು ಅಭಿಪ್ರಾಯ ನೀಡಿದ್ದಾರೆ. ಕೆರೆ ಸಮ್ಮೇಳನದಲ್ಲಿ ಮಲೆನಾಡಿನ ಪುಟ್ಟ ಕೆರೆಗಳು ಹಳ್ಳ, ತೊರೆಗಳ ಉಳಿವಿನ ವಿಷಯದ ಮೇಲೆ 12 ಗೋಷ್ಠಿಗಳು ನಡೆಯಲಿವೆ. ನಾಡಿನ ಹಲವಾರು ತಜ್ಞರು ವಿಷಯ ಮಂಡಿಸಲಿದ್ದಾರೆ.

ಲಿ.,ಕಾರವಾರ
01